ಹೋಗುತ್ತಾರೆಯೇ ? ಇಲಾಖಾ ಕಾರ್ಯ ದರ್ಶಿಗಳಾದವರು ಮುಖ್ಯಮಂತ್ರಿಗಳೊಂದಿಗೆ ಹೋಗುತ್ತಾರೆ. ಆದರೆ, ಉಳಿದ ಅಧಿಕಾರಿಗಳು ಇಲ್ಲಿ ಹಾಜರಿರುವುದಕ್ಕೆ ಅವರಿಗೇನು ಧಾಡಿಯಾಗಿದೆ? ಇಲ್ಲಿ ಸರ್ಕಾರದ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಆದುದರಿಂದ, ತಾವು ಸದನವನ್ನು ಮುಂದಕ್ಕೆ ಹಾಕಿ. ನಿಮಗೆ ನಾವು ಸಹಕಾರ ಕೊಡುತ್ತೇವೆ.

ಅಧ್ಯಕ್ಷರು : ಈಗ ತಾವೆಲ್ಲರೂ ನನ್ನ ಮಾತನ್ನು ಕೇಳಬೇಕು. ಪ್ರಶ್ನೋತ್ತರ ವೇಳೆ, ಶೂನ್ಯ ವೇಳೆ...

(ವಿರೋಧ ಪಕ್ಷದ ನಾಯಕರಾದಿಯಾಗಿ ಭಾರತೀಯ ಜನತಾ ಪಕ್ಷದ ಸದಸ್ಯರು, ವಾಟಾಳ್ ನಾಗರಾಜ್ ಹಾಗೂ ಜೆ.ಸಿ.ಮಾಧುಸ್ವಾಮಿಯವರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ನೀವು ನನ್ನ ಮಾತನ್ನು ಕೇಳಿ. ಇಲ್ಲದಿದ್ದರೆ...

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಸಭೆಯನ್ನು ಮುಂದಕ್ಕೆ ಹಾಕಿ, ಮಧ್ಯಾಹ್ನ ತೆಗೆದುಕೊಳ್ಳಿ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯ ನಂತರ ಶೂನ್ಯವೇಳೆ, ಇದರಲ್ಲಿ ಹಲವಾರು ಪ್ರಮುಖ ವಿಚಾರಗಳನ್ನು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡುತ್ತಾರೆ. ಪ್ರಶ್ನೋತ್ತರ ವೇಳೆಯ ರೀತಿಯೇ ಶೂನ್ಯ ವೇಳೆಯಲ್ಲೂ ಎಲ್ಲಾ ಅಧಿಕಾರಿಗಳು..

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಸಚಿವರು) : ಅಧಿಕಾರಿಗಳು ಉತ್ತರ ಕೊಡುವುದಿಲ್ಲ, ಸರ್ಕಾರ ಉತರ ಕೊಡುತ್ತದೆ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : ಇದು ಸರಿಯಲ್ಲ, ಈ ಧೋರಣೆ ಸರಿಯಲ್ಲ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಹಾಗಾದರೆ ಅಧಿಕಾರಿಗಳ್ಯಾರೂ ಸಭೆಗೆ ಬರತಕ್ಕದ್ದು ಬೇಡ. ಎಲ್ಲದಕ್ಕೂ ಶ್ರೀನಿವಾಸಗೌಡರೇ ಉತ್ತರ ಕೊಡಬೇಕು. ಯಾವ ಅಧಿಕಾರಿಯೂ ಬರತಕ್ಕದ್ದು ಬೇಡ. ಅವರು ಸಭೆಗೆ ಬರುವುದನ್ನು ರದ್ದುಮಾಡಿ.....ಅಧಿಕಾರಿಗಳು ಸಭೆಗೆ ಬರತಕ್ಕದ್ದು ಬೇಡ ಎಂದು ಹೇಳಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಎಲ್ಲರ ಪರವಾಗಿ ತಾವೇ ಮಾತನಾಡಿ. ತಾವು ಜವಾಬ್ದಾರಿಯುತವಾಗಿ ಮಾತನಾಡಬೇಕು.

ಶ್ರೀ ಕೆ.ಶ್ರೀನಿವಾಸಗೌಡ : ನಾನು ಜವಾಬ್ದಾರಿ ಇಟ್ಟುಕೊಂಡೇ ಮಾತನಾಡುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ತಾವು ಅಧಿಕಾರಿಗಳ ಪರವಾಗಿ ಮಾತನಾಡುತ್ತೀರಲ್ಲಾ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಇದನ್ನು ವಿರೋಧಿಸಿ ನಾವೆಲ್ಲರೂ ಸಭಾತ್ಯಾಗ ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಈ ರೀತಿಯ ಧೋರಣೆಗೆ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಭಾರತೀಯ ಜನತಾಪಕ್ಷದ ಸದಸ್ಯರುಗಳು, ವಾಟಾಳ್ ಪಕ್ಷ ಹಾಗೂ ಸಂಯುಕ್ತ ಜನತಾದಳ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ನನ್ನ ಮಾತನ್ನು ಕೇಳಿ.

(ಗೊಂದಲ)

† **ಶ್ರೀ ಪಿ.ಜಿ.ಆರ್. ಸಿಂಧ್ಯಾ : (ಭಾರಿ ಮಧ್ಯಮ, ಹಾಗೂ ಸಣ್ಣ ಕೈಗಾರಿಕೆ ಸಚಿವರು)** ಮಾನ್ಯ ಅಧ್ಯಕ್ಷರೆ, ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಮ್ಮ ಕಾರ್ಯಾಂಗಕ್ಕೆ ಬಹಳ ದೊಡ್ಡ ಜವಾಬ್ದಾರಿ ಇದೆಯೆಂದು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಶಾಸಕಾಂಗಕ್ಕೆ ಪೂರಕವಾಗಿ ಕಾರ್ಯಾಂಗ ಕೆಲಸವನ್ನು ಮಾಡಬೇಕಾಗುತ್ತದೆ. ಇವತ್ತು ಸದನ ನಡೆಯತಕ್ಕ ಸಂದರ್ಭದಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು, ಸಂಬಂಧಪಟ್ಟ ಮಂತ್ರಿಗಳಾದ ನಾವು, ಅದು ವಿಧಾನಸಭೆ ಇರಬೇಕು, ವಿಧಾನ ಪರಿಷತ್ತಿನಲ್ಲಿ ಇರಬೇಕು, ಆ ರೀತಿ ಜವಾಬ್ದಾರಿ ಇರತಕ್ಕ ಒಬ್ಬೊಬ್ಬ ಅಧಿಕಾರಿಗಳು ಇರಬೇಕು ಎನ್ನತಕ್ಕ ಸೂಚನೆಯನ್ನು ಕೊಟ್ಟಿದ್ದೇವೆ. ಯಾವುದೇ ಸಂದರ್ಭದಲ್ಲು ಕೂಡ, ಅದು ನನ್ನ ಇಲಾಖೆ ಇರಬಹುದು, ಕೃಷಿ, ಹಣಕಾಸು, ವೆಟರ್ನರಿ ಇಲಾಖೆ, ಕಂದಾಯ ಇಲಾಖೆ ಇರಬಹುದು, ನಾವು ಎಲ್ಲರಿಗೂ ಸೂಚನೆ ಕೊಟ್ಟಿರುತ್ತೇವೆ. ಅದರ ಪ್ರಕಾರ ಅವರುಗಳು ಇರಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ಯಾರಾದರು ಇರದಿದ್ದರೆ, ವಿರೋಧ ಪಕ್ಷದ ನಾಯಕರು ಮತ್ತು ಇತರೆ ಗೌರವಾನ್ವಿತ ಸದಸ್ಯರುಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದನ್ನು ನಾನು ಡಿಫೆಂಡ್ ಮಾಡಿಕೊಳ್ಳಲು ನಿಂತುಕೊಳ್ಳಲಿಲ್ಲ. ಯಾವುದೇ ಕಾರಣಕ್ಕೂ ಸರ್ಕಾರದ ಅಧಿಕಾರಿಗಳು ಅದರಲ್ಲೂ ಜವಾಬ್ದಾರಿ ಹೊಂದಿರುವ ಅಧಿಕಾರಿಗಳು ಅವರ ಇಲಾಖೆಯಿಂದ ಒಬ್ಬೊಬ್ಬರು ಚರ್ಚೆಯಾಗತಕ್ಕ ಸಂದರ್ಭದಲ್ಲಿ ಇರಲೇ ಬೇಕಾಗುತ್ತದೆ. ಇದರ ಬಗ್ಗೆ ಮುಖ್ಯಕಾರ್ಯದರ್ಶಿಯವರ ಜೊತೆ ಮಾತನಾಡುತ್ತೇನೆ. ಮತ್ತು ಎಲ್ಲಾ ಇಲಾಖೆಯ ಅಧಿಕಾರಿಗಳು ಈ ಸಂದರ್ಭದಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಇರುವಂತೆ ಮಾಡುತ್ತೇನೆ. ಮಾನ್ಯ ಗೌರವಾನ್ವಿತ ಶಾಸಕರುಗಳು ಮತ್ತು ವಿರೋಧ ಪಕ್ಷದ ನಾಯಕರೇನು ಅವರ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ ಅದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ನಾವು ಆ ಕಡೇ ಕುಳಿತಿದ್ದಾಗ ಇದೇ ರೀತಿ ಮಾಡಿರತಕ್ಕದ್ದು ಇದೆ. ಅಲ್ಲೊಂದು ಇಲ್ಲೊಂದು ನಾವು ಮಾತನಾಡಲು ಆಗುವುದಿಲ್ಲ. ಮತ್ತು ನಿಮ್ಮ ಭಾವನೆಯನ್ನು ನಾವು ಅರ್ಥಮಾಡಿಕೊಂಡು ಸರ್ಕಾರದ ಪರವಾಗಿ ಅವರಿಗೆ ಭರವಸೆ ಕೊಡುತ್ತೇನೆ, ಇವತ್ತೇ ಮತ್ತೊಂದು ಸಲ ಸುತ್ತೋಲೆಯನ್ನು ಮುಖ್ಯಕಾರ್ಯದರ್ಶಿಯವರ ಮೂಲಕ ಕಳುಹಿಸಿ ಎಲ್ಲಾ ಸಂದರ್ಭದಲ್ಲು ಅಧಿಕಾರಿಗಳು ಇರತಕ್ಕ ಕೆಲಸವನ್ನು ಮಾಡುತ್ತೇವೆ.

(ಏ) ಬೆಳಗಾವಿ ತಾಲ್ಲೂಕಿನ ಹುತ್ತೇಕ ಗ್ರಾಮದ ಬಳಿಯಿರುವ ಕೋಟೆ ಪ್ರದೇಶದ ಬಗ್ಗೆ.

SRI MANOHAR KALLAPPA KINEKAR (Uchagaon): Sir, In Belgaum taluka near Yadyur village Raj hansagad historical Fort is there. It was constructed by great Sri Chatrapati Shivaji Maharaj about 350 years back. After the independence this Rajgad fort property has been merged with the government property. But because of some mistake,

† ಈ ಭಾಷಣವು ಮಾನ್ಯ ಸಚಿವರಿಂದ ಪರಿಶೀಲಿಸಲ್ಪಟ್ಟಿದೆ.